ಭೂಮಿಯನ್ನು ಅತಿಕ್ರಮಿಸಿಕೊಂಡಿರುವುದಾಗಿ ತಿಳಿದು ಬಂದಿದೆ. ಈಗಾಗಲೇ ಮುಕ್ತಾಯದ ಹಂತಕ್ಕೆ ಬಂದಿರುವ ಈ ಅಕ್ರಮ ಕಟ್ಟಡ ನಿರ್ಮಾಣ ರಾಜ್ಯ ನೀರಾವರಿ ಇಲಾಖೆಯ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್ ಅವರ ಗಮನಕ್ಕೆ ಬಂದಿದ್ದಾಗ್ಯೂ ಯಾವ ಅಡ್ಡಿ ಆತಂಕವಿಲ್ಲದೆ ಕಟ್ಟಡದ ಕೆಲಸ ನಿರಾತಂಕವಾಗಿ ಸಾಗಿದೆ. ಮೇಲ್ಕಂಡ ಇಂಜಿನಿಯರ್ ಅವರಿಗೆ ಈ ಕಟ್ಟಡದ ವಿಷಯ ಪೂರ್ಣವಾಗಿ ಗೊತ್ತಿದ್ದರೂ ಅವರು ಯಾವ ಕ್ರಮವನ್ನೂ ಕೈಗೊಳ್ಳದೆ ಇರುವುದನ್ನು ನೋಡಿದಲ್ಲಿ ಅವರೂ ಕೂಡ ಈ ಅಕ್ರಮದಲ್ಲಿ ಭಾಗಿಯಾಗಿರುವರೆಂದು ಊಹಿಸಬಹುದಾಗಿದೆ. ಈ ವೈದ್ಯರು ಕಟ್ಟಡದ ನಿರ್ಮಾಣಕ್ಕೆ ಮೈಸೂರು ಬ್ಯಾಂಕಿನ ಶಿವಮೊಗ್ಗ ಶಾಖೆ ಹಾಗೂ ಸಾಸಿವೆಹಳ್ಳಿಯ ಕರ್ನಾಟಕ ಬ್ಯಾಂಕ್ ಶಾಖೆಗಳು ಸುಮಾರು ೨ ಲಕ್ಷ ರೂಪಾಯಿಗಳ ಸಾಲವನ್ನು ಈ ವೈದ್ಯರಿಗೆ ನೀಡಿರುವುದೆನ್ನಲಾಗಿದೆ. ಮೇಲ್ಕಂಡ ಅಕ್ರಮ ವ್ಯವಹಾರ ಸ್ಥಳೀಯ ಶಾಸಕರ ಗಮನಕ್ಕೆ ಬಂದಿದ್ದಾಗ್ಯೂ ಸಚಿವರು ವೈದ್ಯರ ಹಿಂದೆ ಇರುವುದರಿಂದ ಶಾಸಕರ ಬಾಯಿಕಟ್ಟಿದಂತೆ ಆಗಿದೆ.

ಸರಕಾರದವರು ಕೂಡಲೇ ಈ ಬಗ್ಗೆ ವಿಚಾರಣೆ ನಡೆಸಿ, ನಾಲೆಯ ಮೇಲೆ ಅಕ್ರಮವಾಗಿ ನಿರ್ಮಿಸುತ್ತಿರುವ ಕಟ್ಟಡವನ್ನು ಕೆಡವಿಸುವುದಲ್ಲದೆ, ಪಾಸಗಿಯವರ ಜಮೀನನ್ನು ಅಕ್ರಮಿಸಿರುವುದನ್ನೂ ತೆರವು ಮಾಡಿಸಿಕೊಡಬೇಕೆಂದೂ, ಇದರಿಂದಾಗಿ ಮುಂದೆ ಆಗಬಹುದಾದ ಅನಾಹುತವನ್ನು ತಪ್ಪಿಸಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಸಚಿವರು).—ನಿಯಮ ೩೩ರ ವಿಧಿಯ ಪ್ರಕಾರ ಈ ಸದನದಲ್ಲಿ ಸನ್ಮಾನ್ಯ ಸದಸ್ಯರಾದ ಶ್ರೀ ಎಂ. ರಾಮಪ್ಪನವರು ಮತ್ತು ಶ್ರೀ ಉಮರಬ್ಬನವರು ಬಹಳ ಪ್ರಾಮುಖ್ಯವಾದ ವಿಷಯವನ್ನು ಎತ್ತಿದ್ದಾರೆ. ಯಾವ ಪೂಜೆ ಮುಖ್ಯ ಮಂತ್ರಿಗಳ ಸಂಬಂಧಿಕರೋ ನನಗಂತೂ ಗೊತ್ತಿಲ್ಲ. ಒಟ್ಟಾರೆ ಸರ್ಕಾರಿ ನಾಲೆಯಲ್ಲಿ ಅಕ್ರಮಣ ಮಾಡಿದ್ದಾರೆ ಎಂದು ಕೇಳಿದೆ. ಅಕ್ರಮಣವನ್ನು ಮಾಡಿರತ್ಕಂಥದ್ದರ ಬಗ್ಗೆ ತನಿಖೆ ನಡೆಸುತ್ತೇನೆ. ವರದಿಯನ್ನು ತರಿಸುತ್ತೇನೆ. ಅವರ ಮೇಲೆ ಕ್ರಮವನ್ನು ಕೈಗೊಳ್ಳುತ್ತೇನೆ. ಇದಕ್ಕಾಗಿ ಸರ್ಕಾರ ತೀವ್ರವಾದ ಪ್ರಯತ್ನ ಮಾಡುತ್ತಿದೆ ಎಂದು ಹೇಳುತ್ತೇನೆ.

ಶ್ರೀ ಎಂ. ರಾಮಪ್ಪ.—ಎಷ್ಟು ದಿವಸದಲ್ಲಿ ?

ಅಧ್ಯಕ್ಷರು.—ಇದರ ಬಗ್ಗೆ ಚರ್ಚೆ ಇಲ್ಲ. ಬೇಕಾದರೆ ಅವರ ಪಕ್ಕದಲ್ಲಿ ಹೋಗಿ ಕುಳಿತುಕೊಂಡು ಕೇಳಿ.

(iii) ಬಂಟ್ವಾಳ ತಾಲ್ಲೂಕು ಬರಿಮಾರು ಗ್ರಾಮದ ಪಾರ್ಪಜೆ ಎಂಬಲ್ಲಿ ಬಡ ಗೇಣಿದಾರ ಶ್ರೀ ಶೇಷಪ್ಪಗೌಡ ಎಂಬುವವರಿಗೆ ಭೂ ಮಾಲೀಕರು ಹೊಡೆದು ಥಳಿಸಿರುವ ಬಗ್ಗೆ

ಶ್ರೀ ವಿನಯಕುಮಾರ್ ಸೊರಕೆ.—ಮಾನ್ಯ ಅಧ್ಯಕ್ಷರೆ. ಕಳೆದ ತಾರೀಖು ೨೨ರಂದು ಬಂಟ್ವಾಳ ತಾಲ್ಲೂಕು ಬರಿಮಾರು ಗ್ರಾಮದ ಪಾರ್ಪಜೆ ಎಂಬಲ್ಲಿ ಬಡ ಗೇಣಿದಾರ ಶ್ರೀ ಶೇಷಪ್ಪಗೌಡ (೮೭) ಎಂಬುವರ ಸ್ಥಳಕ್ಕೆ ಆ ಸ್ಥಳದ ಭೂ ಮಾಲೀಕನ ಕಡೆಯವರೆನ್ನಲಾದ ಕೆಲವರು ಅಕ್ರಮವಾಗಿ ಪ್ರವೇಶಿಸಿ ಶೇಷಪ್ಪಗೌಡ ಅವರ ಪತ್ನಿ ವೆಂಕಮ್ಮ (೭೦) ಇಬ್ಬರು ಮಕ್ಕಳಾದ ಜನಾರ್ದನ ಮತ್ತು ತಿಮ್ಮಕ್ಕ ಅವರನ್ನು ಥಳಿಸಿ ದೊಣ್ಣೆಗಳಿಂದ ಹೊಡೆದು ತೀವ್ರ ಜಖಂಗೊಳಿಸಿದ ಘಟನೆ ನಡೆದಿದೆ. ಜಖಂಗೊಂಡ ಎಲ್ಲರೂ ಈಗ ಮಂಗಳೂರಿನ ಸರಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಗೇಣಿದಾರ ಶೇಷಪ್ಪಗೌಡರ ಸ್ವಾಧೀನದಲ್ಲಿರುವ ಈ ಭೂಮಿಯನ್ನು ಬಲಾತ್ಕಾರವಾಗಿ ಸ್ವಾಧೀನ ಪಡಿಸುವ ಉದ್ದೇಶದಿಂದ ಈ ಕೃತ್ಯ ಮಾಡಲಾಗಿದೆ. ಸದರಿ ಭೂಮಿಗೆ ಸಂಬಂಧಪಟ್ಟಂತೆ ವಿವಾದವು ಇತ್ಯರ್ಥಕ್ಕಾಗಿ ಬಂಟ್ವಾಳ ಭೂ ನ್ಯಾಯ ಮಂಡಳಿಯಲ್ಲಿ ಬಾಕಿ ಇರುವಾಗಲೇ ಭೂ ಮಾಲೀಕ ವರ್ಗದವರು ಮಾಡಿದ ಈ ಅಮಾನವೀಯ ಕೃತ್ಯವನ್ನು ಖಂಡಿಸಲೇಬೇಕಾಗಿದೆ.

ಸರ್ಕಾರವು ಕೂಡಲೇ ಈ ಬಡ ಶೇಷಪ್ಪಗೌಡರ ಕುಟುಂಬಕ್ಕೆ ಸಕಲ ರಕ್ಷಣೆ ಒದಗಿಸಬೇಕು, ಈ ವಿರಪರಾಧಿ ಕುಟುಂಬಕ್ಕೆ ಭೂ ಮಾಲೀಕ ವರ್ಗದವರಿಂದ ಇನ್ನು ಮುಂದೆ ಬರಬಹುದಾದ ಉಪಟಳವನ್ನು ತಪ್ಪಿಸಬೇಕಾಗಿ ಹಾಗೂ ತಪ್ಪಿತಸ್ಥ ಭೂ ಮಾಲೀಕರ ವಿರುದ್ಧ ಉಗ್ರ ಕ್ರಮ ಕೈಗೊಂಡು ಬಡ ಶೇಷಪ್ಪ ಗೌಡರಿಗೆ ನ್ಯಾಯ ದೊರಕಿಸಿಕೊಡಬೇಕಾಗಿ ಸರ್ಕಾರವನ್ನು ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮಂತ್ರಿ ಮತ್ತು ನಗರಾಭಿವೃದ್ಧಿ ಸಚಿವರು).—ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಕಂದಾಯ ಸಚಿವರು ಇದರ ಬಗ್ಗೆ ವರದಿಯನ್ನು ತರಿಸಿ ಇದಕ್ಕೆ ಉತ್ತರ ಕೊಡುತ್ತಾರೆ.

(iv) ಮಂಗಳೂರು ನಗರದಲ್ಲಿ ವಿದ್ಯುತ್ ಸೂಪರಿಂಟೆಂಡೆಂಟ್‌ರವರ ಕಛೇರಿಯನ್ನು ಸ್ಥಾಪಿಸುವ ಬಗ್ಗೆ

ಶ್ರೀ ಬಿ. ಎಂ. ಇದಿನಬ್ಬ.—ಮಾನ್ಯ ಅಧ್ಯಕ್ಷರೇ, ನಮ್ಮ ರಾಜ್ಯದಲ್ಲಿ ಬೆಂಗಳೂರು ನಂತರ ಮಂಗಳೂರು ನಗರವೇ ಎರಡನೇ ದೊಡ್ಡ ನಗರವಾಗಿರುತ್ತದೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿದ್ಯುತ್ ಇಲಾಖೆಯ ಬಗ್ಗೆ ಬೇಕಾದ ವ್ಯವಸ್ಥೆಗಳನ್ನು ಮಾಡಿಕೊಳ್ಳಲು ಸಾಕಷ್ಟು ಅನುಕೂಲತೆ ಬೇಕು. ವಿದ್ಯುತ್ ಸೂಪರಿಂಟೆಂಡೆಂಟ್‌ರವರ ಆಫೀಸು ಶಿವಮೊಗ್ಗದಲ್ಲಿರುವುದರಿಂದ ದಕ್ಷಿಣ ಕನ್ನಡದವರಿಗೆ ತುಂಬಾ ಅಡಚಣೆಯಾಗಿರುತ್ತದೆ. ವಿದ್ಯುತ್ತಿಗೆ ಸಂಬಂಧಿಸಿದ ಅನೇಕ ವಿಚಾರಗಳಿಗೆ ಶಿವಮೊಗ್ಗಕ್ಕೆ ಹೋಗಿ ಬರಬೇಕಾಗುತ್ತದೆ.ಆದಕಾರಣ ಜಿಲ್ಲೆಯ ಹಿತದೃಷ್ಟಿಯಿಂದ ವಿದ್ಯುತ್ ಸೂಪರಿಂಟೆಂಡೆಂಟ್ ಇಂಜಿನಿಯರ್‌ರ ಆಫೀಸನ್ನು ಶಿವಮೊಗ್ಗದಿಂದ ವರ್ಗಾಯಿಸಿ ಮಂಗಳೂರಿನಲ್ಲಿ ಮಾಡುವುದು ಮುಖ್ಯವಾಗಿರುತ್ತದೆ. ಅಲ್ಲದೆ ದಕ್ಷಿಣ ಕನ್ನಡದಲ್ಲಿ ಮೀಟರಿನ ಭಾರೀ ಕೊರತೆ ಇದೆ ವಿದ್ಯುತ್ ಗ್ರಾಹಕರಿಗೆ ಭಾರೀ ಕಷ್ಟ ನಷ್ಟವೂ ಆಗುತ್ತಿದೆ. ಆದಕಾರಣ ದಕ್ಷಿಣ ಕನ್ನಡಕ್ಕೆ ಅತೀ ಶೀಘ್ರ ೫ ಸಾವಿರ ವಿದ್ಯುತ್ ಮೀಟರ್‌ಗಳನ್ನು ಒದಗಿಸುವುದು ಅತೀ ಪ್ರಾಮುಖ್ಯವಾಗಿರುತ್ತದೆ. ಈ ಕುರಿತು ವಿದ್ಯುತ್ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಜಿ. ಬಸವಣ್ಣಪ್ಪ (ಆಹಾರ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಈಗ ವಿಶೇಷ ಸೂಪರಿಂಟೆಂಡೆಂಟ್ ಇಂಜಿನಿಯರ್‌ರವರ ಕಛೇರಿ ಶಿವಮೊಗ್ಗದಲ್ಲಿದೆ. ಅದನ್ನು ಮಂಗಳೂರಿಗೆ ವರ್ಗಾಯಿಸುವುದು ಸಧ್ಯದಲ್ಲಿ ಮಂಡಳಿಯ ಗಮನದಲ್ಲಿಲ್ಲ. ಏತಕ್ಕೆಂದರೆ ಶಿವಮೊಗ್ಗದಲ್ಲಿರುವ ಬಹಳ ಮುಖ್ಯವಾದ ೨೨೦.೧೧೦ ಕೆ.ವಿ ಬಿ. ರೀವಿಂಗ್ ಸ್ಟೇಷನನ್ನು ನೋಡಿಕೊಳ್ಳಬೇಕು. ಹಾಲಿ ಮಂಗಳೂರಿನಲ್ಲಿ ಇನ್ನೂ ಹೆಚ್ಚಿನ ಶ್ರೇಣಿಯ ಚೀಫ್ ಇಂಜಿನಿಯರ್‌ರವರ ಕಛೇರಿ ಮತ್ತು ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಛೇರಿಯಲ್ಲಿ ತಾಂತ್ರಿಕ ಕೆಲಸಗಳು ನಡೆಯುತ್ತಿರುವುದರಿಂದ ಬಳಕೆದಾರರಿಗೆ ಏನೂ ತೊಂದರೆಯಾಗುವುದಿಲ್ಲ. ಆದ್ದರಿಂದ ವಿಶೇಷ ಸೂಪರಿಂಟೆಂಡೆಂಟ್ ಇಂಜಿನಿಯರ್‌ರವರ ಕಛೇರಿಯನ್ನು ಮಂಗಳೂರಿಗೆ ವರ್ಗಾಯಿಸುವ ಪ್ರಶ್ನೆ ಉದ್ಭವಿಸುವುದಿಲ್ಲ. ೧೫೦ ಹೆಚ್ಚು ಮಿಾರಿ ವಿಶೇಷ ಮೀಟರ್‌ಗಳನ್ನು ಶಿವಮೊಗ್ಗಕ್ಕೆ ಕಳುಹಿಸಲಾಗಿದೆ. ಇನ್ನೂ ನಾಲ್ಕು ಸಾವಿರ ಮೀಟರ್‌ಗಳನ್ನು ಮಂಗಳೂರಿಗೆ ಕಳುಹಿಸಲಾಗುವುದು.

(v) ಗುಲ್ಬರ್ಗಾ ನಗರದಲ್ಲಿ ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ

೨-೦೦ ಪಿ.ಎಂ.

ಶ್ರೀ ಆರ್. ವೆಂಕಟರಾಮಯ್ಯ(ಮುಳಬಾಗಿಲು).—

ಗುಲ್ಬರ್ಗಾ ನಗರದಲ್ಲಿ ಕುಡಿಯುವ ನೀರಿನ ಸಮಸ್ಯೆ ತುಂಬಾ ಗಂಭೀರವಾಗಿದೆ. ನಗರದಲ್ಲಿ ನೀರಿಗಾಗಿ ಜನತೆ ಪರದಾಡುತ್ತಾ ಇದ್ದು ಪರಿಸ್ಥಿತಿಯು ಭೀಕರವಾಗಿದ್ದು ಅಲ್ಲಿನ ಜನತೆ ಹೋರಾಟದ ಹಾದಿಗಿಳಿದಿದ್ದಾರೆ. ಪದೇಪದೇ ಎಲ್ಲಾ ಸರ್ಕಾರಗಳು ಕುಡಿಯುವ ನೀರಿನ ಬವಣೆ ತಪ್ಪಿಸುವುದಾಗಿ ಹೇಳಿದ್ದರೂ ಸಮಸ್ಯೆ ಹಾಗೆಯೇ ಉಳಿದು ಜನತೆ ತೊಂದರೆಗೆ ಈಡಾಗಿದ್ದಾರೆ. ಈಗಲೇ ಸಮಸ್ಯೆ ಜಟಿಲವಿದ್ದು ಎರಡು ತಿಂಗಳಲ್ಲಿ ಪರಿಸ್ಥಿತಿ ಇನ್ನೂ ಭೀಕರವಾಗಲಿರುವುದರಿಂದ ಇದನ್ನು ತುರ್ತಾಗಿ ಸರಿಪಡಿಸಲು ಕೋರಿ ನೀರಿನ ಸರಬರಾಜು ಸರಿಪಡಿಸಲು ಈ ಸದನದ ಗಮನವನ್ನು ಸೆಳೆಯುತ್ತಿದ್ದೇನೆ.

ಶ್ರೀ ಎ. ಲಕ್ಷ್ಮೀಸಾಗರ್.(ಕಾನೂನು ಮಂತ್ರಿ ಮತ್ತು ನಗರಾಭಿವೃದ್ಧಿ ಸಚಿವರು)—

ಈಗಾಗಲೇ ಗುಲ್ಬರ್ಗಾ ನಗರದಲ್ಲಿ ೨೫೭ ಕೊಳವೆ ಬಾವಿಗಳನ್ನು ತೋಡಿಸಲಾಗಿದೆ. ಇದರಲ್ಲಿ ೭೭ ಕೊಳವೆ ಬಾವಿಗಳಿಗೆ ವಿದ್ಯುತ್ ಪಂಪು ಜೋಡಿಸಲಾಗಿದೆ. ಉಳಿದ ೧೬೦ ಕೊಳವೆ ಬಾವಿಗಳಿಗೆ ಕೈಪಂಪುಗಳನ್ನು ಜೋಡಿಸಲಾಗಿದೆ. ಈ ಕೆಲಸಕ್ಕೆ ಈಗಾಗಲೇ ೪೫ ಲಕ್ಷ ರೂಪಾಯಿಗಳು ಈವರೆಗೆ ಖರ್ಚಾಗಿದೆ. ಈ ಮೇಲೆ ಹೇಳಿದ ೨೫೭ ಕೊಳವೆ ಬಾವಿಗಳಿಂದ ೧೫ ೫೦ ಲಕ್ಷ ಗ್ಯಾಲನ್ ನೀರಿನ್ನು ಒದಗಿಸಲಾಗುತ್ತಿದೆ.